ಕಮ್ಮಗೊಂಡನಹಳ್ಳಿ, ಕಾಮಾಕ್ಷಿಪಾಳ್ಯ, ಕರಿಸಂದ್ರ, ಕರಿತಿಮ್ಮನಹಳ್ಳಿ, ಕಸವನಹಳ್ಳಿ, ಕತ್ರಿಗೊಪ್ಪೆ, ಕೆಂಪಾಬುದಿ, ಕೊಡಿಗೇಕೆರೆ ಸಿಂಗಸಂದ್ರ, ಕೋಣನಕೊಂಟೆ, ಕೂನೇನ ಅಗ್ರಹಾರ, ಕೊತ್ತನೋರು, ಕೌಡೇನಹಳಳಿ, ಕುಂದಲಹಳ್ಳಿ, ಲಿಂಗರಾಜಪುರ, ಮಹದೇವಪುರ, ಮಲ್ಲಸಂದ್ರ, ಮಲ್ಲತ್ತಹಳ್ಳಿ, ಸಿಂಗಸಂದ್ರ, ಮೊಗಕೆರೆ– ಉತ್ತರಹಳ್ಳಿ, ಮೈಲಸಂದ್ರ, ನಾಗರಭಾವಿ, ನೈನಪ್ಪನ ಶೆಟ್ಟಿಪಾಳ್ಯ, ನದಿಶೆಟ್ಟಪ್ಪ, ನರಸಪ್ಪನಕೆರೆ – ಕರಿಹೊಬನಹಳ್ಳಿ, ನಾಯಂಡಹಳ್ಳಿ – ಹಳೆಕೆರೆ, ನಾಯಂಡಹಳ್ಳಿ – ಉತ್ತರ, ನಲ್ಲಕದಿರೇನಹಳ್ಳಿ – ಹಳೆಕೆರೆ, ನಲ್ಲಕದಿರೇನಹಳ್ಳಿ – ಹೊಸಕೆರೆ ಪರಪ್ಪನ ಅಗ್ರಹಾರ, ಪುಟ್ಟೇನಹಳ್ಳಿ, ಸಾಣೆಗುರುವನ ಹಳ್ಳಿ, ಸಿಂಗಸಂದ್ರ, ಶಿವನಹಳ್ಳಿ – ಯಲಹಂಕ, ಶೀನಿವಾಗಿಲು, ಸಿಂಗಸಂದ್ರ, ವಲಗೆರಹಳ್ಳಿ – ಕೆಳಗಿನಕೆರೆ, ಮೆಗಟಪ್ಪನಕೆರೆ – ಉತ್ತರಹಳ್ಳಿ, ವಿಭೂತಿಪುರ, ವಿಜನಾಪುರ, ವಿಜನಾಪುರ, ಯಡಿಯೂರು.

ಮರಾಠಿ ಭಾಷೆಯ ಸರ್ವೆ ಇಲಾಖೆ ದಾಖಲೆಗಳು

4369(5091) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ವೆ ಇಲಾಖೆಯಲ್ಲಿ ಕೆಲವು ದಾಖಲೆಗಳು ಮೋಡಿ ಮರಾಠಿ ಭಾಷೆಯಲ್ಲಿದೆಯೇ ; ಹಾಗಿದ್ದಲ್ಲಿ ಅವು ಯಾವುವು ;

ಆ) ಇದರಿಂದ ಸಾರ್ವಜನಿಕರಿಗೆ, ಕನ್ನಡಿಗರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ದಾಖಲೆಗಳನ್ನು ಕನ್ನಡ ಭಾಷೆಗೆ ತರ್ಜುಮೆಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ :

ಈ) ಇದರ ಕಾಲಮಿತಿ ಏನು ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಸರ್ವೆ ಇಲಾಖೆಯಲ್ಲಿ ಮೂಲ ಭೂಮಾಪನ ಕಾರ್ಯವು ಸನ್ 1860 ರಿಂದ 1900 ಅವಧಿಯಲ್ಲಿ ನಡೆದಿರುತ್ತದೆ. ಈ ಅವಧಿಯಲ್ಲಿ ತಯಾರಿಸಲಾದ (1) ಮೂಲ ಟಿಪ್ಪಣಿ (2) ಪಕ್ಕಾ ಮತ್ತು (3) ಪ್ರತಿ ಬುಕ್ಕುಗಳು ಮೋಡಿ : ಮರಾಠಿ ಭಾಷೆಯಲ್ಲಿವೆ.

ಆ) ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗಿರುವಂತಹ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಏಕೆಂದರೆ ರೀಸರ್ವೆ ಮತ್ತು ಸೆಟ್ಲ್‌ಮೆಂಟ್ ಕಾಲದಲ್ಲಿ ತಯಾರಿಸಲಾದ ಎಲ್ಲಾ ದಾಖಲೆಗಳು ಕನ್ನಡದಲ್ಲಿರುತ್ತವೆ.

ಇ) (ಅ) ನಲ್ಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಕೊಳವೆ ಮಾರ್ಗದ ಸೋರಿಕೆ

4370(5093) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪಶ್ಚಿಮ ಘಟ್ಟದಲ್ಲಿ ಹಾದುಹೋಗಿರುವ ಕುದುರೆ ಮುಖ ಕಬ್ಬಿಣ ಅದಿರು ಕಂಪನಿಯ ಕೊಳವೆ ಮಾರ್ಗಗಳಲ್ಲಿ ಸೋರಿಕೆ ಉಂಟಾಗಿರುವುದು ನಿಜವೇ ;

ಆ) ಈ ಮಾರ್ಗ ಎಲ್ಲಿಂದ ಎಲ್ಲಿಯವರೆಗೆ ಸಾಗಿದೆ ; ಸೋರಿಕೆಗೆ ಕಾರಣಗಳೇನು ; ಯಾವ ಪ್ರದೇಶದಲ್ಲಿ ಸೋರಿಕೆ ಉಂಟಾಗಿದೆ ;

ಇ) 1980ರ ಅರಣ್ಯ ಕಾಯ್ದೆ, 1978ರ ವನ್ಯಜೀವಿ ಕಾಯ್ದೆಗಳನುಸಾರ ಕಂಪನಿಯು ನಿಯಮ ಪಾಲಿಸುತ್ತಿದೆಯೇ ; ಇಲ್ಲದಿದ್ದಲ್ಲಿ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ ;

ಈ) ಈ ಹಿಂದೆ ಇದೇ ರೀತಿಯ ಸೋರಿಕೆ ದುರಂತ ಸಂಭವಿಸಿತ್ತೇ ;

ಉ) ಕೊಳವೆ ಮಾರ್ಗದಲ್ಲಿ ಸಾಗುವ ಅದಿರಿನ ಪ್ರಮಾಣ ಎಷ್ಟು ಕೊಳವೆ ಮಾರ್ಗದ ಸಾಮರ್ಥ್ಯ ಎಷ್ಟು ; ಸೋರಿಕೆ ತಡೆಯಲು ಯಾವ ಕ್ರಮ ಜರುಗಿಸಲಾಗಿದೆ ?

ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಹೌದು.

ಆ) ಈ ಕೊಳವೆ ಮಾರ್ಗ ಕುದುರೆಮುಖ ಗಣಿಯಿಂದ ಮಂಗಳೂರಿನ ಬಂದರಿನವರೆಗೆ ಸುಮಾರು 67 ಕಿ.ಮೀ.ಗಳ ಉದ್ದ ಸಾಗಿದೆ.

ಕೊಳವೆ ವೆಲ್ಡಿಂಗ್ ಜಾಯಿಂಟ್‌ನಲ್ಲಿ ಬಿರುಕು ಬಿಟ್ಟಿರುವುದರಿಂದ ಸೋರಿಕೆ ಉಂಟಾಗಿದೆ.

ಸೋರಿಕೆಯು ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಆಗಿರುತ್ತದೆ.

ಇ) ಕಾಯ್ದೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲು ಕಂಪನಿಗೆ ನಿರ್ದೇಶಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಕಂಪನಿಯವರು ಕುರುಂಜಾಲಿನಲ್ಲಿ ವೈರ್‌ಲೆಸ್ ರಿಪೀಟರ್ ಟವರನ್ನು ಅಳವಡಿಸಿದ್ದು ಹಗಲು ರಾತ್ರಿ ಸ್ಲರಿ ಸಾಗಿಸುವ ಪೈಪ್ ಲೈನಿನ ಉಸ್ತುವಾರಿ (Monitor) ಮಾಡುತ್ತಿದ್ದಾರೆ.

ಈ) ದಿನಾಂಕ 17.07.2000 ರಂದು ಗಣಿಯಿಂದ 13.5 ನೇ ಕಿ.ಮೀ. ದೂರದಲ್ಲಿ ನೂರಲಬೆಟ್ಟು ಹತ್ತಿರ ಸೋರಿಕೆ ಸಂಭವಿಸಿತ್ತು. ಇದನ್ನು ದುರಸ್ತಿಗೊಳಿಸಲಾಗಿದೆ.

ಉ) ಈ ಕೊಳವೆಯ ಮುಖಾಂತರ ಘಂಟೆಗೆ ಸುಮಾರು 1100 ಘನಮೀಟರ್‌ನಷ್ಟು ಸ್ಲರಿಯನ್ನು ಪಂಪ್ ಮಾಡಲಾಗುತ್ತದೆ. ಇದರಲ್ಲಿ 65% ಅದಿರು ಮತ್ತು ಉಳಿದ ಭಾಗದಷ್ಟು ನೀರು ಇರುತ್ತದೆ. ಕೊಳವೆಯು ವರ್ಷಕ್ಕೆ 7.5 ಮಿಲಿಯನ್ ಟನ್ ಅದಿರು ಸಾಗಿಸುವ ಸಾಮರ್ಥ್ಯ ಹೊಂದಿರುತ್ತದೆ.

ಆದಾಗ್ಯೂ ಪ್ರಸ್ತುತ ವರ್ಷಕ್ಕೆ 5.5 ಮಿಲಿಯನ್ ಟನ್ ಅದಿರನ್ನು ಸಾಗಿಸಲಾಗುತ್ತಿದೆ.

ಸೋರಿಕೆ ತಡೆಯಲು ಈಗ ಕ್ಲಾಂಪ್‌ಗಳನ್ನು ಅಳವಡಿಸಿ ಸೋರುವಿಕೆಯನ್ನು ನಿಲ್ಲಿಸಲಾಗಿದೆ. ಇದಲ್ಲದೆ ಕೊಳವೆ ಮಾರ್ಗದಲ್ಲಿ ಸೋರುವಿಕೆ ಕಂಡು ಬಂದಲ್ಲಿ ಶೀಘ್ರ, ಪ್ರತಿಕ್ರಿಯೆಗಾಗಿ ಕೊಳವೆ ಮಾರ್ಗದ ಮಧ್ಯದಲ್ಲಿ ನಾಲ್ಕು ಪರಿವೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಹೊಸದಾದ ತಾಂತ್ರಿಕತೆಯನ್ನು ಬಳಸಿ ಅಂದರೆ ಆನ್-ಲೈನ್ ಗಣಕಯಂತ್ರಗಳನ್ನು ಉಪಯೋಗಿಸಿ ಕಬ್ಬಿಣದ ಅದಿರಿನ ಸ್ಲರಿಯ ಒತ್ತಡ ಮತ್ತು ಹರಿಯುವಿಕೆಯ ಬಗ್ಗೆ ನಿರಂತರವಾಗಿ ಸದಾನಿಗಾ ವಹಿಸುವುದಾಗಿ ಕಾರ್ಖಾನೆಯವರು ತಿಳಿಸಿರುತ್ತಾರೆ. ಸ್ಲರಿ ಸೋರಿಕೆ ತಡೆಯಲು ಕುರುಂಜಾಲಿನಲ್ಲಿ ವೈರ್‌ಲೆಸ್ ರಿಪೀಟರ್ ಟವರನ್ನು ಅಳವಡಿಸಿದ್ದು ಹಗಲು ರಾತ್ರಿ ಸ್ಲರಿ ಸಾಗಿಸುವ ಪೈಪ್ ಲೈನಿನ ಉಸ್ತುವಾರಿ (Monitor) ಮಾಡಲಾಗುತ್ತಿದೆ.

ರಾಜ್ಯದಲ್ಲಿ ಮೇವಿನ ಬ್ಯಾಂಕ ಸ್ಥಪನೆ

4374(5094) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2002-2003ನೇ ಸಾಲಿನಲ್ಲಿ ಕರ್ನಾಟಕದಲ್ಲಿ ಎಷ್ಟು ಮೇವಿನ ಬ್ಯಾಂಕ್‌ಗಳನ್ನು ಸ್ಥಾಪಿಸಲು ಯೋಜಿಸಲಾಗಿತ್ತು ಮತ್ತು ಎಷ್ಟು ಸ್ಥಾಪಿಸಲಾಗಿದೆ ; ಎಲ್ಲೆಲ್ಲೆ ಸ್ಥಾಪಿಸಲಾಗಿದೆ ; (ವಿವರ ನೀಡುವುದು);